ಹಕ್ಕುಪತ್ರಗಳನ್ನು ಜಾರಿ ಮಾಡಿದ್ದಾರೆ. ಅದೇ ತರಹ ಭಾಲ್ಕಿಯಲ್ಲಿ ಮ್ಯುಟೇಷನ್ ಆಗಲೀ ಅಥವಾ ಬೇರೆ ತರಹದ ರಿಜಿಸ್ಟರ್ ಇಲ್ಲ. ಈ ತರಹ ಭಾಲ್ಕಿ ಪುರಸಭೆ ಒಂದು ಅವ್ಯವಹಾರದ ಪುರಸಭೆ ಆಗಿದೆ. ಅದರ ಸಲುವಾಗಿ ಬಹಳಷ್ಟು ಜನ ಮಹತ್ವವಾದಂತಹ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ ಎಂದು ನಾನು ವಿನಂತಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಅಧ್ಯಕ್ಷರೆ, ಸವಿವರವಾದ ವರದಿ ಕೊಟ್ಟರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ನಾನು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಲೀವ್ ಲೆಟರನ್ನು ಕಳುಹಿಸಿದ್ದಾರೆ. ಮನೆಯಲ್ಲಿ ಮದುವೆ ಇದೆ ಎಂದು ಹೇಳಿದ್ದಾರೆ. ತಮ್ಮ ಕಛೇರಿಗೆ ಕೊಟ್ಟಿದ್ದಾರೆ. ಆ ಕಾರಣ ಅವರಿಗೆ ಸಂಬಂಧಿಸಿದಂತಹ ಪ್ರಶ್ನೆಗಳನ್ನು ಡಿಫರ್ ಮಾಡಬೇಕು.

ಅಧ್ಯಕ್ಷರು : ನಾವು ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಸಣ್ಣ ಕೈಗಾರಿಕೆಗಳ ಬಗ್ಗೆ ಬಹಳಷ್ಟು ಸಮಸ್ಯೆಗಳು ಇದ್ದಾವೆ. ಅವನ್ನು ಪ್ರಿಯಾರಿಟಿ ಮೇಲೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಅವರ ಮನೆಯಲ್ಲಿ ಕಾರ್ಯಕ್ರಮ ಇದೆ ಎಂದು ಹೇಳಿ ಹೋಗಿದ್ದಾರೆ. ಅವರನ್ನು ಕರೆಸೋಣ. ಮುಂದಿನ ಪ್ರಶ್ನೆ ಮಾನ್ಯ ಯು.ಆರ್. ಸಭಾಪತಿಯವರು ಕೇಳಿ.

ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳ ವಿತರಣೆ

544 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರವು ನಿವೇಶನ ವಿತರಣ ಮಾಡಲು ಸ್ವೀಕರಿಸಿದ ಅರ್ಜಿಗಳ ಸಂಖ್ಯೆ ಎಷ್ಟು? ಪಡೆದುಕೊಂಡ ಹಣ ಎಷ್ಟು? ಹಾಗೂ ಎಂದಿನಿಂದ ಅರ್ಜಿಗಳನ್ನು ಸ್ವೀಕರಿಸಲಾಗಿದೆ?

ಆ) ಸದರಿ ನಿವೇಶನ ವಿತರಣೆಯ ವಿಳಂಬಕ್ಕೆ ಕಾರಣಗಳೇನು?

ಇ) ಅರ್ಜಿದಾರರಿಗೆ ನಿವೇಶನವನ್ನು ಎಂದು ವಿತರಣೆ ಮಾಡಲಾಗುವುದು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) 1940 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ರೂ.16,19,000-00 ಹಣ ಪಡೆಯಲಾಗಿದೆ ದಿನಾಂಕ 15-2-99 ರಿಂದ 31-3-99ರ ವರೆಗೆ ಅರ್ಜಿಯನ್ನು ಸ್ವೀಕರಿಸಲಾಗಿದೆ.

ಆ) ಸೂಕ್ತವಾದ ಜಮೀನು ದೊರೆಯದಿದ್ದ ಕಾರಣ ನಿವೇಶನಗಳನ್ನು ಹಂಚಲು ವಿಳಂಬವಾಗಿದೆ.

೫) ಭೂ ಸ್ವಾಧೀನಗೋಸ್ಕರ ಜಮೀನನ್ನು ಗುರುತಿಸಲಾಗುತ್ತಿದೆ. ಶೀಘ್ರ ಭೂ ಸ್ವಾಧೀನ ಪಡಿಸಿಕೊಂಡು ನಿವೇಶನಗಳನ್ನು ಹಂತ ಹಂತವಾಗಿ ಹಂಚಲಾಗುವುದು.

11.30 ಎ.ಎಂ.

ಶ್ರೀ ಯು. ಆರ್. ಸಭಾಪತಿ : ಸನ್ಮಾನ್ಯ ಅಧ್ಯಕ್ಷರೆ, ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದವರು 1999ರ ಮಾರ್ಚಿ ತಿಂಗಳಿನಲ್ಲಿ ನಿವೇಶನ ದೊರಕಿಸಿಕೊಡುವ ಸಂಬಂಧವಾಗಿ ಸಾರ್ವಜನಿಕರಿಂದ ಅರ್ಜಿಗಳ ಜೊತೆಗೆ ಹಣವನ್ನು ಸಹ ಸ್ವೀಕರಿಸಿದ್ದಾರೆ. ಅರ್ಜಿಗಳನ್ನು ಸ್ವೀಕರಿಸಿ ಈಗಾಗಲೇ ಒಂದು ವರ್ಷ ಏಳು ತಿಂಗಳು ಕಳೆದಿವೆ. ಅರ್ಜಿದಾರರಿಂದ ಸುಮಾರು 16,19,000 ರೂಪಾಯಿಗಳಷ್ಟು ಹಣ ಪಡೆಯಲಾಗಿದೆಯೆಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದವರು ಸಾರ್ವಜನಿಕರಿಂದ ನಿವೇಶನ ದೊರಕಿಸಿಕೊಡುವ ದಿಸೆಯಲ್ಲಿ ಪಡೆದುಕೊಂಡಿರುವ ಹಣಕ್ಕೆ ಬಡ್ಡಿ ಕೊಡುತ್ತಾರೆಯೇ? ಸದರಿ ಪ್ರಾಧಿಕಾರದವರು ಮೊದಲೇ ಜಮೀನು ಗುರ್ತಿಸದೆ ಸಾರ್ವಜನಿಕರಿಂದ ಈ ರೀತಿ ಅರ್ಜಿ ಜೊತೆಗೆ ಹಣ ಸ್ವೀಕರಿಸಿರುವುದು ಸರಿಯೇ? ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಮೊದಲು ಉಡುಪಿ ಯೋಜನಾ ಪ್ರಾಧಿಕಾರವಾಗಿದ್ದು, 1998ರ ನಂತರ ಅದನ್ನು ಅಭಿವೃದ್ಧಿ ಪ್ರಾಧಿಕಾರವನ್ನಾಗಿ ಪರಿವರ್ತಿಸಿದ ಬಳಿಕ ಅಲ್ಲಿಂದ ಸಾರ್ವಜನಿಕರಿಗೆ ನಿವೇಶನಗಳನ್ನು ವಿತರಿಸುವ ಕೆಲಸ ನಡೆದಿದೆ. ಈಗಾಗಲೇ ಸಾರ್ವಜನಿಕರಿಂದ 1940 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಈ ಸಂಬಂಧ ಸುಮಾರು 16, 19,000 ರೂಪಾಯಿಗಳನ್ನು ಪಡೆಯಲಾಗಿದ್ದು, ಇದು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಜಮಾ ಆಗಿರುತ್ತದೆ. ನಿವೇಶನ ಕೋರಿ ಈಗಾಗಲೇ ಅರ್ಜಿ ಜೊತೆಗೆ ಹಣ ಸಂದಾಯ ಮಾಡಿರುವ ಸಾರ್ವಜನಿಕರಿಗೆ ಆದಷ್ಟು ಬೇಗನೆ ನಿವೇಶನ ದೊರಕಿಸಿಕೊಡಬೇಕೆಂಬ ಬಗ್ಗೆ ಸನ್ಮಾನ್ಯ ಸದಸ್ಯರ ಆಗ್ರಹವೇನಿದೆ, ಈ ಕುರಿತು ನಾನು ಈಗಾಗಲೇ ಅಲ್ಲಿನ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿದ್ದು, ಆದಷ್ಟು ಬೇಗ ಜಮೀನು ಗುರ್ತಿಸಿ ನಿವೇಶನಗಳನ್ನು ಅರ್ಜಿದಾರರಿಗೆ ಒದಗಿಸಿಕೊಡುವಂಥ ಕೆಲಸ ಮಾಡುತ್ತೇವೆ. ಅರ್ಜಿದಾರರು ನಿವೇಶನಕ್ಕಾಗಿ ಸಂದಾಯ ಮಾಡಿರುವ ಹಣದ ಮೇಲೆ ಬಡ್ಡಿ ಕೊಡಲಾಗುತ್ತದೆಯೇ? ಎಂದು ಮಾನ್ಯ ಸದಸ್ಯರು ಕೇಳಿರುವುದಕ್ಕೆ, ಇದಕ್ಕೆ ಬಡ್ಡಿ ಕೊಡುವ ಪ್ರಯತ್ನವನ್ನು ನಾವ್ಯಾರೂ ಕೂಡ ಮಾಡಬಾರದು. ಬಡ್ಡಿ ಕೊಡುವ ಬದಲಾಗಿ ಎಲ್ಲಾ ಅರ್ಜಿದಾರರಿಗೂ ನಿವೇಶನ ಕೊಡುವ ಪ್ರಯತ್ನ ಮಾಡುತ್ತೇವೆ.

ಶ್ರೀ ಯು.ಆರ್. ಸಭಾಪತಿ : ಅಲ್ಲಿನ ಜಿಲ್ಲಾಧಿಕಾರಿಗಳು ನಗರಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾರೆ. ಅರ್ಜಿದಾರರಿಂದ ಅರ್ಜಿಗಳನ್ನು ಸ್ವೀಕರಿಸಿ ಈಗಾಗಲೇ ಒಂದು ವರ್ಷ ಏಳು ತಿಂಗಳು ಕಳೆದಿದ್ದರೂ ನಿವೇಶನದ ಜಾಗವನ್ನು ಗುರ್ತಿಸುವುದಕ್ಕೆ ಏನು ತೊಂದರೆ ಇದೆ? ಇದರಲ್ಲಿರುವ ಅಡ್ಡಿ- ಆಡಚಣೆಗಳಾದರೂ ಏನು? ನಿವೇಶನ ಗುರ್ತಿಸುವವರು ಜಿಲ್ಲಾಧಿಕಾರಿಗಳು. ಹೀಗಿರುವಾಗ ನನ್ನ ಕಳಕಳಿ ಏನೆಂದರೆ, 1940 ಅರ್ಜಿದಾರರಿಂದ ಅರ್ಜಿಗಳನ್ನು ಹಾಗೂ ಹಣ ಸ್ವೀಕರಿಸಿ ಇಷ್ಟು ಕಾಲದವರೆಗೂ ನಿವೇಶನ ದೊರಕಿಸಿಕೊಡುವುದಕ್ಕಾಗದಿದ್ದರೆ ಸ್ವೀಕರಿಸಿರುವ ಹಣವನ್ನಾದರೂ

ಅರ್ಜಿದಾರರಿಗೆ ವಾಪಸ್ಸು ಕೊಡಬೇಕಲ್ಲ. ನಿವೇಶನ ಗುರ್ತಿಸುವುದಕ್ಕೆ ಇದುವರೆವಿಗೂ ಸಾಧ್ಯವಾಗಿರುವುದಿಲ್ಲವೆಂದರೆ ಏನರ್ಥ? ಇದಕ್ಕೆ ನಾನು ಸರ್ಕಾರದಿಂದ ಉತ್ತರ ಬಯಸುತ್ತೇನೆ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಉಡುಪಿಯಲ್ಲಿ ಸಾರ್ವಜನಿಕರಿಗೆ ನಿವೇಶನ ದೊರಕಿಸಿ ಕೊಡುವ ಸಂಬಂಧ ಅರ್ಜಿದಾರರಿಂದ ಮೊದಲೇ ಹಣ ಪಡೆದುಕೊಂಡಿರುವುದರಿಂದ ನಗರಭಿವೃದ್ಧಿ ಪ್ರಾಧಿಕಾರದವರು ಆ ಹಣವನ್ನು ಖರ್ಚು ಮಾಡಿದ್ದಾರೆಯೇ? ಎಂಬುದರ ಬಗ್ಗೆ ಸಚಿವರು ತಿಳಿಸಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಅರ್ಜಿದಾರರು ನಿವೇಶನ ಕೋರಿ ಸಂದಾಯ ಮಾಡಿರುವ ಹಣ ಎಲ್ಲಿಗೂ ಹೋಗುವುದಿಲ್ಲ, ಅದು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿಯೇ ಇರುತ್ತದೆ. ಈ ಕುರಿತು ಹೇಳುವುದಾದರೆ, ಮೊದಲು 214 ಎಕರೆಯಷ್ಟು ಜಮೀನನ್ನು ಪಡೆದುಕೊಳ್ಳಬೇಕೆಂದು ಒಂದು ಪ್ರಯತ್ನ ನಡೆಯಿತು. ನಂತರ ಇದನ್ನು ಕೈಬಿಟ್ಟು ಈಗ ತಕ್ಷಣ ಸುಮಾರು 50 ಎಕರೆಯಷ್ಟು ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಪ್ರಯತ್ನ ನಡೆದಿದೆ ಇನ್ನೊಂದು ವಿಷಯವೇನೆಂದರೆ, ಉಡುಪಿಯಲ್ಲಿ ಜಮೀನಿನ ಬೆಲೆ ಸ್ವಲ್ಪ ಜಾಸ್ತಿಯಿರುವುದರಿಂದ ನಮ್ಮ ದರಕ್ಕೆ ಸಿಗುವುದಿಲ್ಲವಾದ್ದರಿಂದ ಕನ್‌ಸೆಂಟ್ ಅವಾರ್ಡ್ ಮಾಡಿ ಇಲ್ಲವೇ ಮ್ಯುಚುಯಲ್ ಆಗ್ರಿಮೆಂಟ್ ಮಾಡಿ ತೆಗೆದುಕೊಳ್ಳಬೇಕಾಗುತ್ತದಾದ್ದರಿಂದ, ಆದಷ್ಟು ಶೀಘ್ರವಾಗಿ ನಿವೇಶನದಾರರಿಗೆ ನಿವೇಶನ ದೊರಕಿಸಿಕೊಡುವ ಪ್ರಯತ್ನ ಮಾಡುತ್ತೇವೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿ ವಸತಿ ನಿಲಯಗಳು

545 - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರ (ಸೇಡಂ ತಾಲ್ಲೂಕು ಹಾಗೂ ಚಿತ್ತಾಪುರ ತಾಲ್ಲೂಕಿನ 11 ಗ್ರಾಮಗಳು ಸೇರಿ) ದಲ್ಲಿ ವಿದ್ಯಾರ್ಥಿ ವಸತಿ ನಿಲಯಗಳು ಮಂಜೂರಾಗಿದ್ದರೂ ಅವುಗಳ ಕಟ್ಟಡವಿಲ್ಲದಿರುವುದು ಈ ಗ್ರಾಮಾಂತರ ಪ್ರದೇಶಗಳಲ್ಲಿ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಬಂದಿದ್ದಲ್ಲಿ ಇಂತಹ ವಿದ್ಯಾರ್ಥಿ ನಿಲಯಗಳು ಮಂಜೂರಿಯಾಗಿ ಕಟ್ಟಡಗಳು ಇಲ್ಲದ ವಸತಿ ನಿಲಯಗಳ ಸಂಖ್ಯೆ ಎಷ್ಟು?*

ಇ) *ಇವುಗಳ ಕಟ್ಟಡಗಳ ನಿರ್ಮಾಣ 2000-2001 ಸಾಲಿನಲ್ಲಿ ಪೂರ್ತಿ ಮಾಡಿ ಹೈದರಬಾದ್ ಕರ್ನಾಟಕ ಪ್ರದೇಶದ ಹಿಂದುಳಿದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗುವುದೇ?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಸೇಡಂ ಕ್ಷೇತ್ರದಲ್ಲಿ ಒಟ್ಟು 16 ವಿದ್ಯಾರ್ಥಿ ನಿಲಯಗಳಿದ್ದು, ಈ ಪೈಕಿ 11 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ.